**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**OS: 115-15** **PW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 29.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಹೆಚ್ ಹೆಗಡೆ, ವಕೀಲರಿಂದ ಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.

ನಾನು ಒಟ್ಟು 3 ಚೆಕ್ಕುಗಳನ್ನು ಮತ್ತು ಅವು ನಗಧೀಕರಣವಾಗದ ಕಾರಣ ತೋರಿಸುವ ಮೇಮೋಗಳನ್ನು ಹಾಜರಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ.19, 19-(ಎ), 20, 20-(ಎ), 21, 21-(ಎ) ಎಂದು ಗುರುತಿಸಲಾಯಿತು.

ರಾಯನಾಳ ಗ್ರಾಮ ಪಂಚಾಯತ ಆಸ್ತಿ ನಂಃ 921 ಇದರ ಸ್ವಾಧೀನತೆ ತೋರಿಸಲು ಗ್ರಾಮ ಪಂಚಾಯತಿ ಇವರು ಕೊಟ್ಟ ದೃಢೀಕರಣ ಪತ್ರ ಹಾಜರಪಡಿಸಿದ್ದು ಅದನ್ನು ನಿಪಿ.22 ಎಂದು, ಆ ಆಸ್ತಿ ಈ - ಖಾತೆಯ ಉತಾರೆಯನ್ನು ನಿಪಿ.23 ಎಂದು, ಆ ಮನೆ ಕಟ್ಟಡದ ನಕಾಶೆಯನ್ನು ನಿಪಿ.24 ಎಂದು, ಅಲ್ಲಿಗೆ ಅಂಗಡಿ ನಡೆಸುತ್ತಿರುವ ಬಗ್ಗೆ ಪಂಚಾಯತಿವರು ಕೊಟ್ಟ ಲೈಸೆನ್ಸನ್ನು ನಿಪಿ.25 ಎಂದು, ಅದರ ವಿದ್ಯುತ್ಚ್ಛಕ್ತಿ ಬಿಲ್ಲು ಮತ್ತು ನೀರಿನ ಬಿಲ್ಲುಗಳನ್ನು ನಿಪಿ.26 ಹಾಗೂ ನಿಪಿ.27 ಎಂದು, ಲೈಸೆನ್ಸ ತುಂಬಿದ ರಶೀದಿಯನ್ನು ನಿಪಿ.28 ಎಂದು, ಆ ಮನೆ ಮತ್ತು ಅಂಗಡಿಯ 6-ಭಾವಚಿತ್ರಗಳನ್ನು ಮತ್ತು ಸಿ ಡಿ ಯನ್ನು ಸಾಭೀತುಪಡಿಸುವ ಕರಾರಿನೊಂದಿಗೆ ನಿಪಿ.29 ಮತ್ತು ನಿಪಿ.29(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಮಯ ಕೋರಿದರು,**

**ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.